**ದಿ**: 15-10-2025 **ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಶ್ರೀ ಎಸ್.ಎನ್. ವಕೀಲರಿಂದ ಪ್ರತಿವಾದಿಯ ಪರವಾಗಿಃ**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮತ್ತು ದಾವೆಗೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ. ಅದರಲ್ಲಿ ಬರೆದಿರುವ ವಿಷಯವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. Agreement ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾದಿ ಮತ್ತುಪ್ರತಿವಾದಿಯ ನಡುವೆ ಆದ Agreement ಪ್ರತಿಯನ್ನುನನಗೂ ಕೊಟ್ಟಿದ್ದರು ಅಂದರೆ whatsapp ಮುಖಾಂತರ ಕಳುಹಿಸಿದ್ದರು. ಆ Agreement ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. Agreement ನ್ನು ನಾನು ಕುಲಂಕುಷವಾಗಿ ನೋಡಿ ಸಹಿ ಮಾಡಿದ್ದೇನೆ ಅಂದರೆ ನಿಜ. Agreement ಪ್ರಕಾರ ನಾನು ಯಾವುದೇ ಷರತ್ತುಗಳನ್ನು ಪಾಲನೆ ಮಾಡಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳ ಕಂಪನಿಯ Market Executive ರವರ ಸಹಾಯದಿಂದ ನಾನು ಕರ್ನಾಟಕ ರಾಜ್ಯಾದ್ಯಂತ ಶೇಖರಣೆ ಮಾಡುವುದು ಮತ್ತು ವಿತರಣೆ ಮಾಡುವುದು ಇರುತ್ತದೆ ಅಂದರೆ ನಮ್ಮದು ಇರುವುದಿಲ್ಲ. ಆ ರೀತಿಯ ಷರತ್ತು agreement ನಲ್ಲಿ ಇರುತ್ತದೆ ಅಂದರೆ marketing team appoint ಮಾಡಬೇಕು ಅಂತ ಇದೆ. ನಾವೇ ಕಂಪನಿ Market Executive ರವರಿಗೆ ನೇಮಿಸಬೇಕು ಅಂತ Guidelines ಇರುತ್ತದೆ ಅಂದರೆ ಸರಿಯಲ್ಲ. Marketing team executive ರವರು ಪಡೆದಿರುವ order ಗಳನ್ನು ನಾವು ವಿತರಣೆ ಮಾಡಬೇಕು ಅಂದರೆ ಸಂಬಂಧಪಟ್ಟ ಅಂಗಡಿಗಳಿಗೆ order delivery ಮಾಡುತ್ತೇವೆ. ಅದರ ಸಂಪೂರ್ಣ ಜವಬ್ದಾರಿ ನಮ್ಮದೇ ಇರುತ್ತದೆ ಅಂದರೆ ನಿಜ. ನಾವು ಕಂಪನಿಗೆ ಕಂಪನಿಯ Guidelines ಪ್ರಕಾರ ಆ ವಸ್ತವಿನ ಶೇಖರಣೆ ಮತ್ತು ವಿತರಣೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಕಂಪನಿ ಯವರು ನೀಡಿದ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ಶೇಖರಣೆ

ಮತ್ತು ವಿತರಣೆ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ನಿಜ. ದಿಃ 31-08-2021ರಂದು ನಾವು ₹.2,00,667/-, ದಿಃ 24-09-2021ರಂದು ₹.4,00,000/- ರೂಪಾಯಿಗೆ, ದಿಃ 06-11-2021ರಂದು ₹.2,00,000/- ರೂಪಾಯಿಗೆ ಪ್ರತಿವಾದಿಯು ನಮಗೆ ಕೊಡಬೇಕಾದ ವಸ್ತುಗಳನ್ನು delivery ಮಾಡಿದ್ದಾರೆ ಅಂದರೆ ₹.2,00,667/- ಮತ್ತು ₹.4,00,000/-ಮೊತ್ತಕ್ಕೆ ಮಾತ್ರ ವಸ್ತುಗಳು ಮಾತ್ರ ಬಂದಿವೆ ಅದರಲ್ಲಿ ಎರಡು ಮೊತ್ತವನ್ನು ಸೇರಿ ₹.2,014 /- ರಷ್ಟು ಕಡಿಮೆ goods delivery ಆಗಿದೆ. ಕಂಪನಿಯ ನಿಯಮದ ಪ್ರಕಾರ ನಾವು ತೆಗೆದುಕೊಂಡಿರುವ order ನಲ್ಲಿ 50% ನಷ್ಟು storage ಇಡಬೇಕು ಅಂದರೆ ನಿಜ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.